ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶ್ರೀರಂಗಪಟ್ಟಣ
ಸಿಸಿಃ ನಂಃ **199/2019**

ಪಿ.ಡಬ್ಲ್ಯೂಃ **01**

ಸಿ.ಡಬ್ಲ್ಯೂಃ **01**

| | |
|---|---|
| ಸಾಕ್ಷಿಯ ಹೆಸರು | ಸುರೇಶ್ ಎಸ್.ಎಲ್ |
| ತಂದೆ/ಗಂಡನ ಹೆಸರು | ಲೇ. ಲಿಂಗೇಗೌಡ |
| ವಯಸ್ಸು | 63 ವರ್ಷ |
| ಉದ್ಯೋಗ | ವ್ಯವಸಾಯ |
| ವಿಳಾಸ | ಜಯನಗರ, ಬೆಂಗಳೂರು |

ಸಾಕ್ಷಿಗೆ ದಿನಾಂಕ **26.12.2024** ರಂದು ಪ್ರಮಾಣವಚನ ನೀಡಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ ಸ ಅ ರವರಿಂದಃ

ಚಾ ಸಾ **2** ರಿಂದ **5** ಗೊತ್ತು. ಆರೋಪಿ ಗೊತ್ತು ನನ್ನ ಅಣ್ಣ.

ಕಿರಂಗೂರಿನಲ್ಲಿ ನಮ್ಮ ಒಟ್ಟು ಕುಟುಂಬಕ್ಕೆ ಸೇರಿದ ಒಂದು **6** ಮಳಿಗೆಗಳುಳ್ಳ ಕಟ್ಟಡವಿದ್ದು **3** ಅಂಗಡಿ ಮಳಿಗೆ ನನ್ನ ಸ್ವಾಧೀನದಲ್ಲಿದ್ದು ನಾನು ಎಡಭಾಗದ ಒಂದು ಮಳಿಗೆ, ಬಲಭಾಗದ ಒಂದು ಮಳಿಗೆಯನ್ನು ಬೇರೆಯವರಿಗೆ ಬಾಡಿಗೆಗೆ ನೀಡಿದ್ದು ಮಧ್ಯದ ಮಳಿಗೆಯನ್ನು ನನ್ನ ಸ್ವಂತಕ್ಕೆ ಇಟ್ಟುಕೊಂಡಿದ್ದೆ. ಸದರಿ ಮಳಿಗೆಯಲ್ಲಿ ನಾನು ಆಟೋ ಮೊಬೈಲ್ ಸ್ಪೇರ್ ಮಾರಾಟ ಮಾಡಲು ಉಪಯೋಗಿಸುತ್ತಿದ್ದೆ. ನಾನು ಅಭಿಶೇಕ್ ಎಂಟರ್ ಪ್ರೈಸಸ್ ಎಂಬ ಶೀರ್ಷಕೆಯಲ್ಲಿ ನಡೆಸುತ್ತಿದ್ದೆ. ನಾನು ಸದರಿ ವ್ಯವಹಾರಕ್ಕೆ ಸಂಬಂದಿಸಿದಂತೆ ಆದಾಯ ತೆರಿಗೆ ಪಾವತಿಸುತ್ತೇನೆ. ನನಗೆ ಅನಾರೋಗ್ಯವಿದ್ದ ಕಾರಣ ಸದರಿ ಮಳಿಗೆಯನ್ನು ಮುಚ್ಚಿ ಬೀಗವನ್ನು ನಾನು ಹೊಂದಿರುತ್ತೇನೆ. ನಾನು ಬೆಂಗಳೂರಿನಲ್ಲಿ ವಾಸವಿರುವುದನ್ನು ದುರುಪಯೋಗಪಡಿಸಿಕೊಂಡು ಆರೋಪಿ ನನ್ನ ವಶದಲ್ಲಿದ್ದ ಮಳಿಗೆಯ ಬೀಗವನ್ನು ಪದೇ ಪದೇ ಹೊಡೆಯುತ್ತಿದ್ದ. ದಿ. **24.03.2016** ರಲ್ಲಿ ನನ್ನ ಸ್ವಾಧೀನದಲ್ಲಿದ್ದ ಮಳಿಗೆಯ ಬೀಗ ಹೊಡೆದಿರುತ್ತಾನೆ. ನಾನು ಸ್ಥಳಕ್ಕೆ ಬಂದು ಮತ್ತೊಂದು ಬೀಗ ಹಾಕಿದ್ದು ಮತ್ತೆ ಬಂದು ದಿ. **28.03.2016** ರಂದು ಬೀಗ ಹೊಡಿದಿರುತ್ತಾನೆ. ನಾನು ಪೋಲಿಸರಿಗೆ ದೂರು ನೀಡಿರುತ್ತೇನೆ. ಪೋಲಿಸರು ಈ ಬಗ್ಗೆ ಎನ್.ಸಿ.ಆರ್ ದಾಖಲಿ ಮಾಡಿರುತ್ತಾರೆ. ನಾನು ಸದರಿ ಅಂಗಡಿಗೆ ಸಿಸಿ ಟಿ.ವಿ ಯನ್ನು ಅಳವಡಿಸಿರುತ್ತೇನೆ. ದಿ. **19.01.2017** ರಂದು ಸುಮಾರು **10.45** ರ ವೇಳೆಗೆ

ಆರೋಪಿಯು ಹೆಲ್ಮೆಟ್ ಧರಿಸಿ ದ್ವಿಚಕ್ರ ವಾಹನದಲ್ಲಿ ಬೀಗ ಹೊಡೆಯುವವರನ್ನು ಅಂಗಡಿ ಬಳಿ ಕರೆತಂದಿರುತ್ತಾನೆ. ಆ ಸಂದರ್ಭದಲ್ಲಿ ಪಕ್ಕದಲ್ಲಿದ್ದ ಪಾನಿಪುರಿ ಅಂಗಡಿಯಲ್ಲಿ ಅವಿತಿದ್ದು ಬೀಗ ಹೊಡೆಯುವವನಿಗೆ ನಿರ್ದೇಶನ ನೀಡಿ ಬೀಗ ಹೊಡೆಯುವಂತೆ ಸೂಚಿಸಿರುತ್ತಾನೆ. ಬೀಗ ಹೊಡೆದ ನಂತರ ಅವರನ್ನು ಕರೆದುಕೊಂಡು ದ್ವಿಚಕ್ರ ವಾಹನದಲ್ಲಿ ಹೊರಟುಹೋಗಿರುತ್ತಾನೆ. ನಾನು ಹೇಳಿದ ಈ ಮೇಲ್ಕಂಡ ಹೇಳಿಕೆಯ ಅಂಶಗಳು ಸಿಸಿ ಟಿ.ವಿ ಕ್ಯಾಮರಾದಲ್ಲಿ ಸೆರೆಯಾಗಿರುತ್ತದೆ. ನಾನು ಈ ಬಗ್ಗೆ ಪೋಲಿಸರಿಗೆ ದಿ. **21.01.2017** ರಂದು ದೂರು ನೀಡಿರುತ್ತೇನೆ. ಸದರಿ ದೂರಿನ ಮೇರೆಗೆ ಪೋಲಿಸರು ಠಾಣೆಗೆ ಆತನನ್ನು ಕರೆಸಿ ಬುದ್ಧಿವಾದ ಹೇಳಿ ಕಳುಹಿಸಿರುತ್ತಾರೆ. ದಿ. **15.02.2017** ರಂದು ನಾನು ನ್ಯಾ.ದ ಸಂಕೀರ್ಣದಲ್ಲಿರುವಾಗ್ಗೆ ಮತ್ತೊರ್ವ ಬಸವರಾಜು ಎಂಬುವವರನ್ನು ಕರೆದುಕೊಂಡು ಹೋಗಿ ನನ್ನ ಅಂಗಡಿ ಮಳಿಗೆ ಬೀಗವನ್ನು ಹೊಡೆದಿರುತ್ತಾನೆ. ದಿ. **13.05.2017** ರಂದು ಮತ್ತೊಮ್ಮೆ ಬೀಗ ಹೊಡೆದಿರುತ್ತಾನೆ. ನಾನು ಅದೇ ದಿನ ರಾತ್ರಿ **7.30** ಕ್ಕೆ ಪೋಲಿಸರಿಗೆ ದೂರು ನೀಡಿರುತ್ತೇನೆ. ಈ ಬಗ್ಗೆ ಪೋಲಿಸರು ಪ್ರ.ವ.ವರದಿಯನ್ನು ದಾಖಲಿಸಿರುತ್ತಾರೆ. ನಂತರ ದಿ. **14.05.2017** ರಂದು ಬೆ. **10.45** ರ ವೇಳೆಗೆ ಮಹಜರ್ ಕ್ರಮ ಜರುಗಿಸಲು ಯೋಗಾಂಜನಪ್ಪ ಪೋಲಿಸ್ ಉಪನಿರೀಕ್ಷಕರು ಮಹಜರ್ ಕ್ರಮ ಜರುಗಿಸಲು ಬಂದಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಅಭಿಯೋಜಕರು ಕಾಲಾವಕಾಶ ಕೋರಿದ್ದು, ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ